

ನರ್ಸ್ ಬಂದಳು. 'ಫುಡ್ ಕಲ್ಚರ್ ಹೇಳ್ತಾರ... ಹಸರ ತರಕಾರಿ ಪಲ್ಯ, ಚಿಕನ್ ಮತ್ತು ಎಗ್ಸ್ ಕೊಡಬೋದು. ಹಾಸ್ಪಿಟಲ್ ಕ್ಯಾಂಟೀನ್‌ದು ಊಟ ಛಲೋನ ಅದ... ನೀವು ಮನಿಂದ ತರಬೋದು...ಚಿಕನ್ ಮತ್ತ ಎಗ್... ಮತ್ತ ಆಯಸ್ಕ್ರೀಮ್, ಹಾಲಿಂದ ಮಾಡಿದ ಸ್ವೀಟ್...' ಹೇಳಿದಳು. ಸಲೈನ್‌ನಲ್ಲಿ ಔಷಧ ಇಂಜೆಕ್ಟ್ ಮಾಡಿ, ಗುಳಿಗೆಗಳನ್ನಿಟ್ಟು ಹೋದಳು. ಇಬ್ಬರಲ್ಲೂ ಹೊಸ ಚೈತನ್ಯದ ಚಿಕ್ಕ ಬೆಳಕಿನ ಕಿರಣ ಮೂಡಿತು.

ಅಂದಿನ ಇರುಳು. ಸುನೀತಾ ಮಗಳ ಹತ್ತಿರ ಆಸ್ಪತ್ರೆಯಲ್ಲಿದ್ದಳು. ಜೊತೆಗೆ ಅಮೃತಾ. ರಾಮಗೊಂಡ ಮನೆಗೆ ಬಂದ. ಮಗಳ ಕಂಡೀಷನ್ ಮರೆಯಲೋ, ಅವಳು ಸಾಯಬಹುದೆಂಬ ಆತಂಕ ದೂರವಾಗಿಸಲೋ- ಬರುವ ಮುನ್ನ ಎರಡು ಪೆಗ್ ಹಾಕಿದ್ದ. ನಿದ್ದೆಯೂ ಬರಲೆಂದು ಇರಲೂಬಹುದು. ಸರಿಯಾಗಿ ಊಟವೂ ರುಚಿಸಿರಲಿಲ್ಲ. ಹಾಸಿಗೆಗೆ ಮೈ ಒಡ್ಡಿದರೆ ಉಹುಂ. ನಿದ್ದೆ ಹರತಾಳು ಹೂಡಿತ್ತು. ಎಷ್ಟೇ ಮಗ್ಗುಲ ಬದಲಿಸಿದರೂ ನಿದ್ದೆ ಕಾಣೆ. ಡಾಕ್ಟರ್ ತಮ್ಮ ಸಂಬಂಧಿಕರ ಹುಡುಗಿಯನ್ನೇ ಉಳಿಸಿಕೊಳ್ಳಲಾಗಿಲ್ಲ. ನಮ್ಮದೇನು ಗತಿ? ಡಾಕ್ಟರ್ ಪೆನ್ನಿಟ್ಟು ತೋರಿಸಿದ ದೃಷ್ಟಾಂತ ಕಾಡುತ್ತಲಿತ್ತು. ಅದು ಮತ್ತೆ ಮತ್ತೆ ಜ್ಞಾಪಕಕ್ಕೂ ಬರುತ್ತಿತ್ತು. ದೇವರೇ ಸರ್ವೈವ್ ಆಗುವ ರೇಖೆಯತ್ತ ಮಗಳ ಆರೋಗ್ಯ ಸಾಗಲಿ ಎಂದು ಬೇಡಿಕೊಂಡ.

ಮನಃಪಟಲದ ಮೇಲೆ ಥರಾವರಿ ಚಿತ್ರಗಳು. ಸವಿತಾ ತೀರಿಕೊಂಡರೆ? ಈ ಕಲ್ಪನೆಯೇ ಆತನನ್ನು ಸಾವಿರ ಸಾರೆ ಕೊಲ್ಲುತ್ತಿತ್ತು. ವಿಹ್ವಲಗೊಳಿಸಿತ್ತು. ಸವಿತಾ ಸತ್ತರೆ, ಅವ್ವನ ಗೋರಿ ಪಕ್ಕದಲ್ಲಿ ಆಕೆಯದೂ ಒಂದು ಗೋರಿ ಕಟ್ಟೋದು. ಸ್ಮೃತಿಯ ರೂಪಕವಾಗಿಸೋದು. ಅವ್ವನ ಥಡಿ ಕಟ್ಟಿದ್ದು ಸೋದರನ ಹೊಲದಲ್ಲಿ. ಆದರೆ ಆತ ಸವಿತಾಳಿಗೂ ಥಡಿ ಕಟ್ಟಲು ಆಸ್ಪದ ನೀಡಬಲ್ಲನೆ? ಅವನೊಂದು ತರಹ ವಿಚಿತ್ರ ಮನುಷ್ಯ. ಲಹರಿ ಬಾಜ್! ಅವನ ಕೈಕಾಲು ಹಿಡಿದಾದರೂ ಥಡಿ ಕಟ್ಟಲು ಒಪ್ಪಿಸುವೆ- ಹೀಗೆಲ್ಲ ಹುಚ್ಚು ವಿಚಾರಗಳು ತಲೆಯೊಳಗೆ ಹರಿದಾಡತೊಡಗಿದವು. ಪರಿಸ್ಥಿತಿಗಳನ್ನೆದುರಿಸಲು ಮಾಡಿಕೊಂಡ ತಾಲೀಮುಗಳು. ಇವು ಹುಚ್ಚು ಮನಸ್ಸಿನ ಹತ್ತಾರು ಮುಖಗಳು. ಖರೆ ಅರ್ಥದಲ್ಲಿ ರಾಮಗೊಂಡನಿಗೆ ಹುಚ್ಚು ಹಿಡಿದಂತಾಗಿತ್ತು.

ಲಿವರ್ ಟ್ರಾನ್ಸ್‌ಪ್ಲಾಂಟ್ ಒಂದು ಆಪ್ಷನ್ ಇದೆಯಲ್ಲ! ಆದರೆ ಅದು ನೈಜವಾಗಿರುವುದಿಲ್ಲ. ಭಿನ್ನ ದೇಹಕ್ಕೆ ಹೊಂದಿಕೊಂಡು ಅದು ಬದುಕಬೇಕು. ಬದುಕಿಸಬೇಕು. ಅದಕ್ಕಾಗಿ ಸಾವಿರಾರು ಮೊತ್ತದ ಔಷಧಗಳನ್ನು ನಿತ್ಯ ಸೇವನೆ ಮಾಡಬೇಕು. ಟ್ರಾನ್ಸ್‌ಪ್ಲಾಂಟ್ ಮಾಡಿಸಿಯಾದರೂ ಮಗಳನ್ನು ಉಳಿಸಿಕೊಳ್ಳಲೇಬೇಕು ಎಂತಲೂ ಆತ ಯೋಚಿಸಿದ. ಇಂಥ ಅಸಂಬದ್ಧ ವಿಚಾರಗಳು ಹಾಸಿಗೆಯಲ್ಲಿ ಬಿದ್ದ ರಾಮಗೊಂಡನನ್ನು ಹೆಕ್ಕಿ ಮುಕ್ಕಿ ತಿನ್ನುತ್ತಿದ್ದವು. ನಿದ್ರೆ